


## ಜಾನಪದಕ್ಕೆ ಬೇಕು ಪ್ರೋತ್ಸಾಹ

‘ಡಿಜಿಟಲ್ ಫ್ರೇಮು ಜಾನಪದಕ್ಕೆ ಫೇಮು’ (ಜುಲೈ 20, ಎಂ.ಎಸ್. ಯೋಗೇಶ್), ಜಾನಪದ ಲೋಕದ ಅವಲೋಕನದಂತಿದೆ. ಜನಪದ ಗಾಯಕ ಮಳವಳ್ಳಿ ಮಹದೇವಸ್ವಾಮಿ ಅವರ ಕುರಿತ ಲೇಖನ ಚೆನ್ನಾಗಿ ಮೂಡಿಬಂದಿದೆ. ‘ಅನ್ಯಾಯಕಾರಿ ಬ್ರಹ್ಮ’ ಗೀತೆ 28 ವರ್ಷಗಳ ಬಳಿಕ ಮತ್ತೆ ಜೀವ ಪಡೆದುಕೊಂಡಿರುವುದು ಸಂತೋಷವೇ ಸರಿ.

ಮಹಾರಾಷ್ಟ್ರ, ಉತ್ತರಪ್ರದೇಶ, ಪಂಜಾಬ್ ರಾಜ್ಯಗಳಲ್ಲಿ ಜನಪದಕ್ಕೆ, ಗಾಯಕರಿಗೆ ಸಿಗುತ್ತಿರುವ ಪ್ರೋತ್ಸಾಹವನ್ನು ನಮ್ಮ ಸರ್ಕಾರ ಗಮನಿಸಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು ಮತ್ತು ಯುವಪೀಳಿಗೆಗೆ ನಮ್ಮ ಜಾನಪದದ ಜೀವಸೆಲೆಯನ್ನು ಜೀವಂತವಾಗಿಡುವ ಪ್ರಯತ್ನ ಮಾಡಬೇಕು.

—ಸಿಹಿಮೊಗೆ ರಮೇಶ್, ಮೈಸೂರು

## ಕಾಲಕ್ಕೆ ತಕ್ಕಂತೆ ಮುಂದುವರೆಯಲಿ

ಜನಪದ ಕಲೆಗಳಿಗೆ ಡಿಜಿಟಲ್ ಸ್ಪರ್ಶ ಸಿಕ್ಕರೆ ಜಾದೂ ಸೃಷ್ಟಿಯಾಗಬಲ್ಲದು ಎಂಬುದನ್ನು ಈಚೆಗೆ ಮುನ್ನೆಲೆಗೆ ಬಂದ ‘ಅನ್ಯಾಯಕಾರಿ ಬ್ರಹ್ಮ’ ಹಾಡು ತೋರಿಸಿಕೊಟ್ಟಿತು. ಇದರಂತೆ ಎಷ್ಟೋ ಜನಪದ ಕಲೆಗಳು ಮೂಲೆ ಗುಂಪಾಗಿರಬಹುದು. ಸತ್ವವಿದ್ದರೂ ಬೆಳಕಿಗೆ ಬರದೆ ಉಳಿದಿರಬಹುದು. ಜನಪದ ಕಲೆಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರೆಯಬೇಕಾದರೆ ಮೂಲಕ್ಕೆ ಧಕ್ಕೆಯಾಗದಂತೆ ಕಾಲಕ್ಕೆ ತಕ್ಕಂತೆ ಬದಲಾಗುವುದೂ ಮುಖ್ಯ. ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಬೇಕು. ಜನಪದ ಹಾಡುಗಳ ಕಣಜದಂತಿರುವ ಮಹದೇವಸ್ವಾಮಿ ಅವರ ಸಂದರ್ಶನ ಸಕಾಲಿಕವಾಗಿದೆ. ಅವರಿಂದ ಕಲೆಯನ್ನು ದಾಟಿಸುವ ಕೆಲಸ ನಡೆಯಬೇಕಿದೆ.

—ಸರಸ್ವತಿ ಕೆ.ಆರ್., ಚಾಮರಾಜನಗರ

## ಡಿಜಿಟಲ್ ಸಂರಕ್ಷಣೆ ಮುಖ್ಯ

ಜನಪದ ಗೀತೆ ಕುರಿತ ಲೇಖನದಲ್ಲಿ ಮುಖಪುಟ ಚಿತ್ರವೇ ಎಲ್ಲವನ್ನೂ ಹೇಳುವಂತಿದೆ. ಭಾವ–ಭಾವನೆ–ಅಲಂಕಾರ– ನೃತ್ಯ ಪೋಷಾಕು ಎಲ್ಲವೂ ಮಿಳಿತಗೊಂಡು ಆಕರ್ಷಕವಾಗಿ ಮೂಡಿಬಂದಿದೆ. ಜನಪದ ಹಾಡುಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸುವುದು ಇಂದಿನ ಅಗತ್ಯವಾಗಿದೆ.

—ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

## ಪತ್ತೇದಾರಿ ಪ್ರಿಯರಿಗೆ ಖುಷಿ

ಬಹಳ ಸಮಯದ ನಂತರ ‘ಸುಧಾ’ದಲ್ಲಿ ಪತ್ತೇದಾರಿ ಧಾರಾವಾಹಿ ಆರಂಭವಾಗಿದ್ದು ಸಂತಸ ತಂದಿದೆ. ‘ಆಪರೇಷನ್ ಅಮ್ಮು’ (ಜುಲೈ 20, ಮೋಹನ್ ಪ್ರಸಾದ್) ಪತ್ತೇದಾರಿ ಪ್ರಿಯರಿಗೆ ಖುಷಿ ನೀಡುವುದರಲ್ಲಿ ಸಂಶಯವಿಲ್ಲ.

—ಸುರತ್ಕಲ್ ರವಿರಾಜ ಬೈಕಂಪಾಡಿ

## ಉತ್ತಮ ತನಿಖಾ ಕಥೆ

‘ಆಪರೇಷನ್ ಅಮ್ಮು’ ಧಾರಾವಾಹಿಯ ಮೊದಲ ಸಂಚಿಕೆಯೇ ಕುತೂಹಲ ಕೆರಳಿಸಿದೆ. ನಟಿಯ ಕೊಲೆಯೊಂದರ ಸುತ್ತ ನಡೆಯುತ್ತಿರುವ ತನಿಖೆ, ಸಾಧ್ಯತೆಗಳು ಕಾದಂಬರಿ ಚೆನ್ನಾಗಿರುವ ಸೂಚನೆ ನೀಡಿವೆ. ಪೊಲೀಸ್ ಪ್ರಪಂಚದ ಪರಿಚಯವನ್ನೂ ಮಾಡಿಕೊಡುತ್ತಿದೆ. ಇದೇ ಕುತೂಹಲವನ್ನು ಕಾಪಾಡಿಕೊಂಡು ಕಥೆ ಮುಂದುವರೆಯಲಿ ಎಂಬುದು ನನ್ನ ಆಶಯ.

—ನೇತ್ರಾ ಬಿ.ಆರ್., ನೆಲಮಂಗಲ

## ಮಾಯಣ್ಣ ಪಾತ್ರ ಚೆನ್ನಾಗಿದೆ

ಪತ್ತೇದಾರಿ ಧಾರಾವಾಹಿ ಬಹಳ ಕುತೂಹಲಕಾರಿಯಾಗಿ ಆರಂಭವಾಗಿದೆ. ಪೊಲೀಸ್ ಮಾಯಣ್ಣ ಪಾತ್ರ ಆಸಕ್ತಿದಾಯಕವಾಗಿದೆ. ಕಥೆ ಜೊತೆಜೊತೆಗೆ ಪೊಲೀಸ್ ತನಿಖಾ ವಿಧಾನಗಳ ಬಗ್ಗೆಯೂ ಧಾರಾವಾಹಿ ಮಾಹಿತಿ ನೀಡುತ್ತದೆ.

—ಕಿರಣ ಎಂ.ಎಸ್., ಮೈಸೂರು

## ನೇಪಥ್ಯಕ್ಕೆ ಸರಿದಿರುವುದು ವಿಷಾದ

‘ಮಂಡಿಯೂರಿದ ಕ್ರಿಕೆಟ್ ದೈತ್ಯ’ (ಜುಲೈ 20, ವಿಶಾಖ ಎನ್.) ಲೇಖನದಲ್ಲಿ ಹೇಳಿರುವಂತೆ, ಕ್ರಿಕೆಟ್ ಕ್ಷೇತ್ರದಲ್ಲಿ ಅತ್ಯಂತ ಬಲಿಷ್ಠ ತಂಡವೆಂದು ಹೆಸರಾಗಿದ್ದ ವೆಸ್ಟ್ ಇಂಡೀಸ್, ಆಟದಿಂದ ವಿಮುಖವಾಗುತ್ತಿರುವುದು ಕ್ರಿಕೆಟ್ ವಲಯದಲ್ಲಿ ಅಚ್ಚರಿ ಮೂಡಿಸಿದೆ. ಎದುರಾಳಿಗಳಿಗೆ ಸಿಂಹಸ್ವಪ್ನವಾಗಿದ್ದ ತಂಡವೀಗ ನೇಪಥ್ಯಕ್ಕೆ ಸರಿಯುತ್ತಿರುವುದು ವಿಷಾದನೀಯ.

—ಪ್ರಭಾ ಪ್ರಸಾದ್, ಬೆಂಗಳೂರು

## ಮನಸ್ಸಿಗೆ ಹತ್ತಿರವಾದ ಕಥೆ

ಮಾರ್ಟಿನ್ ಜಾನ್ ಅವರ ‘ಇಳಿಹೊತ್ತಿನ ಸಂಗಾತಿ’ (ಜುಲೈ 20, ಅನುವಾದ: ಎಚ್.ಎಂ. ಕುಮಾರಸ್ವಾಮಿ) ಕಥೆ ಮನಮುಟ್ಟುವಂತಿದೆ. ಇಳಿವಯಸ್ಸಿನಲ್ಲಿ ಆಧಾರವಾಗಬೇಕಿದ್ದ ಮಕ್ಕಳು ದೊಡ್ಡ ಸಂಪಾದನೆಗೆ ವಿದೇಶದಲ್ಲಿ ನೆಲೆಸಿದ ಸಂದರ್ಭ, ವೃದ್ಧದಂಪತಿ ಗಿಳಿಯನ್ನು ತಂದು ಮಕ್ಕಳಂತೆಯೇ ಸಲಹುವ ರೀತಿ ಕನಿಕರ ತಂದಿತು. ತನ್ನ ಸಾಕಿದ್ದವರಿಗೆ ಆದ ನೋವು ಕಂಡು ಮರಳಿ ಬಂದ ಗಿಳಿಯನ್ನು ಕಂಡು ಸಂತೋಷವಾಯಿತು. ಮಕ್ಕಳು ದೂರ, ಸಾಕಿದ ಗಿಳಿ ಹತ್ತಿರ. ಮೂಕ ಜೀವಿಗಳಿಗೆ ಇರಬೇಕಾದ ಕೃತಜ್ಞತೆ ಮನುಷ್ಯ ಜೀವಿಗಳಾದ ಮಕ್ಕಳಿಗೆ ಇರದೇ ಹೋದುದು ಎಂತಹ ವಿಪರ್ಯಾಸ.

—ಎಂ.ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

## ಮಾರ್ಮಿಕ ಸಂದೇಶ

ಪ್ರಾಣಿ ಪಕ್ಷಿಗಳಿಗೆ ಒಂದು ಹಿಡಿ ಅನ್ನ, ಒಂದು ಮುಷ್ಟಿ ಕಾಳು ಹಾಕಿದರೆ ಅವು ತಮ್ಮ ಜೀವನ ಪೂರ್ತಿ ಮನುಷ್ಯನಿಗೆ ಕೃತಜ್ಞವಾಗಿರುತ್ತವೆ.



ಈ ಸತ್ಯವನ್ನು ‘ಇಳಿಹೊತ್ತಿನ ಸಂಗಾತಿ’ ಕಥೆ ಎತ್ತಿತೋರಿದೆ. ಕನ್ನಡಕ್ಕೆ ಬಹಳ ಸುಂದರವಾಗಿ ಅನುವಾದ ಮಾಡಿದ್ದಾರೆ. ‘ಪ್ರೀತಿ’ ಕಥೆಯೂ ಅಷ್ಟೇ ಪರಿಣಾಮಕಾರಿಯಾಗಿದೆ. ಇದರಲ್ಲಿ, ಆಳು ಭಗವಾ ಹೇಳುವ ‘ದುಡಿದು ತಿನ್ನೋ ಅನ್ನದ ಮೇಲೆಯೇ ಪ್ರೀತಿ’ ಎನ್ನುವ ಮಾತು ಮಾರ್ಮಿಕವಾಗಿದೆ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ಸಮಯೋಚಿತ ಬರಹ

‘ಕ್ರಿಕೆಟ್ ಮೆಕ್ಕ ಬದಲಾಯಿತೇ?’ (ಜುಲೈ 13, ವಿಶಾಖ ಎನ್.) ಲೇಖನ ಸಮಯೋಚಿತವಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಕ್ರೀಡೆಗೂ ರಾಜಕೀಯಕ್ಕೂ ಇರುವ ನಂಟು ಇಂದು ನಿನ್ನೆಯದಲ್ಲ. ರಾಷ್ಟ್ರೀಯ ಕ್ರೀಡೆ ಎಂದೇ ಪರಿಗಣಿಸಲಾಗಿರುವ ಕ್ರಿಕೆಟ್ ಸಹ ರಾಜಕೀಯದಿಂದ ಹೊರತಾಗಿಲ್ಲ. ಈ ಕಾರಣ, ಇತ್ತೀಚಿನವರೆಗೂ (ಐಪಿಎಲ್ ಪ್ರಾಮುಖ್ಯತೆಗೆ ಬರುವ ಮುನ್ನ) ನಮ್ಮದೇ ಆದ ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ಸಹ ನಿರ್ಲಕ್ಷ್ಯಕ್ಕೆ ಒಳಗಾಗಿದ್ದದ್ದು ಹೊಸ ವಿಷಯವಲ್ಲ. ನಾಳೆ ಅಹ್ಮದಾಬಾದ್ ಕ್ರೀಡಾಂಗಣ ಸಹ ನಿರ್ಲಕ್ಷ್ಯಕ್ಕೆ ಒಳಗಾದರೆ ಅಚ್ಚರಿಯಿಲ್ಲ.

—ಶ್ರೀನಿವಾಸನ್ ಎಸ್.ಕೆ., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in